ಇ) ಉಚಿತ ಕಾನೂನು ನೆರವು ನೀಡುವಲ್ಲಿ ಮಹತ್ವವನ್ನು ತಿಳಿಸಿ ಕಾರ್ಯವಿಧಾನ ಚುರುಕುಗೊಳಿಸುವಂತೆ ಕಾರ್ಯದರ್ಶಿ, ರೋಣರವರಿಗೆ ತಿಳುವಳಿಕೆ ಪತ್ರ ಕಳುಹಿಸಲಾಗಿದೆ. ರೋಣ ತಾಲ್ಲೂಕು ಕಾನೂನು ನೆರವು ಸಮಿತಿಯ ಕಾರ್ಯವಿಧಾನವನ್ನು ಪುನಃ ರಚಿಸುವ ವಿಷಯವು ಕರ್ನಾಟಕ ಕಾನೂನು ನೆರವು ಮಂಡಳಿಯ ತೀವ್ರ ಪರಿಶೀಲನೆಯಲ್ಲಿದೆ.

ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ಕಾನೂನು ನೆರವಿನ ಸಮಿತಿಯು ನೆರವಿನಿಂದ ಇಷ್ಟಾರ್ಥವಾದ ಪ್ರಕರಣಗಳ ಸಂಖ್ಯೆ ೨೫೯೭ ಎಂದು ಇಲ್ಲಿ ಹೇಳಿದೆ. ಇದಕ್ಕೆ ಪೂರಕವಾಗಿ ಮತ್ತೆ ಕೆಲವು ವಿವರಗಳನ್ನು ಕೊಡುತ್ತೇನೆ. ಅದೇನೆಂದರೆ, ನಾವು ಉಚಿತವಾಗಿ ಏನು ಸಲಹೆಗಳನ್ನು ಕೊಡುತ್ತೇವೆ, ಅದೂ ಸಹ ಲೀಗಲ್ ಏಡ್‌ನಲ್ಲಿಯೇ ಬರುತ್ತದೆ. ಹಿರ್ಜಳಿ ಕೇಸ್‌ಗಳಲ್ಲಿ ನಾವು ಉಚಿತವಾಗಿ ಸಲಹೆಗಳನ್ನು ಕೊಟ್ಟಿದ್ದೇವೆ. ಬೆಂಗಳೂರಿನ ಜನತಾ ನ್ಯಾಯಾಲಯದ ಮುಂದೆ ೨೬೬ ಕೇಸ್‌ಗಳನ್ನು ಇತ್ಯರ್ಥ ಮಾಡಿದ್ದೇವೆ. ಇವೆಲ್ಲಾ ಒಟ್ಟು ಸೇರಿದರೆ ೬೭೫೭ ಆಗುತ್ತದೆ. ಇದರ ಜೊತೆಗೆ ತಾಲ್ಲೂಕ್‌ಗಳಲ್ಲಿ ಎಂದರೆ ಕೋರ್ಟುಗಳಿರುವ ಕಡೆಗಳಿರುವ ಕಡೆಗಳಲ್ಲಿ ಉಚಿತ ಕಾನೂನಿನ ನೆರವನ್ನು ಕೊಟ್ಟಿದ್ದೇವೆ. ಇಂತಹ ಪ್ರಕರಣಗಳ ಸಂಖ್ಯೆ ೬೨೮೨. ಇವೆಲ್ಲಾ ಒಟ್ಟು ಸೇರಿ ೧೩,೦೩೯ ಕೇಸ್‌ಗಳಲ್ಲಿ ಉಚಿತವಾಗಿ ಕಾನೂನಿನ ನೆರವನ್ನು ಕೊಡುವುದಕ್ಕೆ ನಮಗೆ ಸಾಧ್ಯವಾಗಿದೆ.

ಶ್ರೀ ಜ್ಞಾನದೇವದೊಡ್ಡಮೇಟಿ.—ಇದರಲ್ಲಿ ಗೇಣಿದಾರರ ಪರವಾಗಿ ಎಷ್ಟು ಅರ್ಜಿಗಳು ಬಂದಿವೆ ?

ಶ್ರೀ ಎ. ಲಕ್ಷ್ಮೀಸಾಗರ್.—ಇಲ್ಲಿಯವರೆಗೆ ಲ್ಯಾಂಡ್ ಟ್ರಿಬ್ಯುನಲ್‌ನಲ್ಲಿ ಕೊಟ್ಟಂತಹ ತೀರ್ಪಿನ ಮೇಲೆ ಕೆಲವರು ಹೈಕೋರ್ಟಿನಲ್ಲಿ ರಿಟ್ ಪಿಟಿಷನ್ ಹಾಕಿತ್ತಿದ್ದರು. ಆದರೆ ನಾವು ಇತ್ತೀಚೆಗೆ ಮಾಡಿದ ಕಾನೂನಿನ ಅನ್ವಯ ಈ ಕೇಸ್‌ಗಳು ರೆವಿನ್ಯೂ ಅಥಾರಿಟಿ ಮುಂದೆ ಹೋಗುತ್ತವೆ. ಈ ಕೇಸ್‌ಗಳಿಗೆ ಸಂಬಂಧಪಟ್ಟಂತೆ ನಾವು ಎಷ್ಟು ಜನರಿಗೆ ನೆರವು ಕೊಡುವುದಕ್ಕೆ ಸಾಧ್ಯವಾಯಿತು ಎಂಬ ಬಗ್ಗೆ ಮಾನ್ಯ ಸದಸ್ಯರು ಬೇರೆ ಪ್ರಶ್ನೆ ಕೇಳಿದರೆ ನಾನು ಉತ್ತರ ಕೊಡುತ್ತೇನೆ.

ಉತ್ತರ ಕನ್ನಡ ಜಿಲ್ಲೆಯಂ ವಿವಿಧ ಆಸ್ಪತ್ರೆಗಳಲ್ಲಿ ಕೆಲಸ ಮಾಡುತ್ತಿರುವ ದಾದಿಯಂರು

೨೨ (೧೩೮) ಶ್ರೀ ಆರ್. ಎನ್. ನಾಯ್ಕ (ಭಟ್ಕಳ).—ಮಾನ್ಯ ಆರೋಗ್ಯ ಮತ್ತು ಅಬಕಾರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ವಿವಿಧ ಆಸ್ಪತ್ರೆಗಳಲ್ಲಿ ಒಟ್ಟಿಗೆ ಕೆಲಸ ಮಾಡುತ್ತಿರುವ ದಾದಿಗಳ ಸಂಖ್ಯೆ ಎಷ್ಟು ?

ಆ) ಸರ್ಕಾರಿ ಆದೇಶ ಸಂಖ್ಯೆ ಡಿಪಿಎಆರ್ ೯ ಎಸ್‌ಟಿಆರ್ ೮೪ ಸೆಪ್ಟೆಂಬರ್ ೫, ಇಸವಿ ೧೯೮೫ ರ ಪ್ರಕಾರ ದಾದಿ ಹುದ್ದೆಯವರು ಒಂದು ಸ್ಥಳದಲ್ಲಿ ಅತಿ ಹೆಚ್ಚೆಂದರೆ ಎಷ್ಟು ವರ್ಷ ಕೆಲಸ ಮಾಡಬಹುದೆಂದು ನಿಗಧಿಪಡಿಸಲಾಗಿದೆ?

ಇ) ನಿಗಧಿತ ಅವಧಿ ಮೀರಿ ಎಷ್ಟು ದಾಧಿಗಳು ಉತ್ತರ ಕನ್ನಡ ಜಿಲ್ಲೆಯಲ್ಲಿ ಕೆಲಸ ಮಾಡ[illegible] ತಲಿದ್ದಾರೆ ?

ಈ) ಹಾಗೆ ನಿಗಧಿತ ಅವಧಿಯೀರಿ ಕೆಲಸ ಮಾಡುತ್ತಿರುವವರನ್ನು ವರ್ಗಾಯಿಸಲಾಗಿದೆಯೇ? ಉತ್ತರ ಕನ್ನಡ ಜಿಲ್ಲೆಯ ಜಿಲ್ಲಾ ಆರೋಗ್ಯ ಅಧಿಕಾರಿಗೆ ಆದೇಶ ಏನಾದರೂ ಕಳುಹಿಸಲಾಗಿತ್ತೆ?

ಉ) ಸರ್ಕಾರಿ ಆದೇಶ ಪತ್ರದಂತೆ ಅವರು ನಡೆದುಕೊಳ್ಳದಿದ್ದಲ್ಲಿ ಕಾರಣಗಳೇನಾದರೂ ಇದೆಯೇ ?

ಶ್ರೀ ಹೆಚ್.ಟಿ. ಕೃಷ್ಣಪ್ಪ (ಆರೋಗ್ಯ ಮಂತ್ರಿಗಳು).—

ಅ) ಉತ್ತರ ಕನ್ನಡ ಜಿಲ್ಲೆಯಲ್ಲಿನ ವಿವಿಧ ಸರ್ಕಾರಿ ಆಸ್ಪತ್ರೆಗಳಲ್ಲಿ ಒಟ್ಟಿಗೆ ಕೆಲಸ ಮಾಡತ್ತಿರುವ ದಾದಿಯರ ಸಂಖ್ಯೆ ೬೦.

ಆ) ಅಧಿಕೃತ ಜ್ಞಾಪನಾ ಸಂಖ್ಯೆ ಡಿಪಿಎಆರ್ ೯ ಎಸ್‌ಟಿಆರ್ ೮೪ ದಿನಾಂಕ ೫-೯-೮೫ ರ ಪ್ರಕಾರ ಗರಿಷ್ಠ ೫ ವರ್ಷ ಸೇವೆ ಸಲ್ಲಿಸಬಹುದು.

ಇ) ಗರಿಷ್ಠ ಅವಧಿಯು ಐದು ವರ್ಷ ಮುಗಿಸಿರುವ ಶುಶ್ರೂಷಕಿಯರ ಸಂಖ್ಯೆ ೨೧.

ಈ) ಇಲ್ಲ.

ಉ) ಉದ್ಭವಿಸುವುದಿಲ್ಲ.

ಶ್ರೀ ಆರ್.ಎನ್. ನಾಯ್ಕ.—ಮಾನ್ಯ ಅಧ್ಯಕ್ಷರೇ, ನನ್ನ (ಇ) ಪ್ರಶ್ನೆಗೆ ಉತ್ತರವಾಗಿ ಗರಿಷ್ಠ ಅವಧಿಯು ಐದು ವರ್ಷ ಮುಗಿಸಿರುವ ಶುಶ್ರೂಷಕಿಯರ ಸಂಖ್ಯೆ ೨೧ ಎಂದು ತಿಳಿಸಿದ್ದಾರೆ. ನಾನು ಈ ಪ್ರಶ್ನೆ ಕೇಳಿದ ಉದ್ದೇಶವಾದರೂ ಇಷ್ಟೆ. ಈ ಜಿಲ್ಲೆಯಲ್ಲಿ ಕೆಲವು ನರ್ಸ್‌ಗಳು ಬಹಳ ಕಾಲದಿಂದ ಬದಲಾವಣೆ ಆಗದಿರುವುದಕ್ಕೆ ಕಾರಣವಾದರೂ ಏನು ? ಇವರನ್ನು ಬದಲಾವಣೆ ಮಾಡುವುದಕ್ಕೆ ಇರತಕ್ಕಂಥ ತೊಂದರೆಯಾದರೂ ಏನು ? ಇಲ್ಲಿ ತಾವು ಒಂದು ಆಜ್ಞೆಯನ್ನು ಕೊಡ್ ಮಾಡಿ ಹೇಳಿದ್ದೀರಿ. ಕಾನೂನು ಪ್ರಕಾರ ೫ ವರ್ಷಗಳಿಗೆ ಮೇಲ್ಪಟ್ಟು ಯಾರು ಒಂದೇ ಕಡೆ ಸೇವೆಯನ್ನು ಸಲ್ಲಿಸಿರುತ್ತಾರೋ ಅಂತಹವರನ್ನು ಬೇರೆ ಕಡೆ ವರ್ಗಾವಣೆ ಮಾಡಬೇಕೆಂದು ಕಾನೂನು ಇದೆ. ಆದರೂ ಸಹ ಕೆಲವು ಸರ್ಕಾರಿ ನೌಕರರು ೧೦–೧೫ ವರ್ಷಗಳಿಂದಲೂ ಒಂದೇ ಕಡೆ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಇಂತಹವರನ್ನು ಡಿ.ಎಚ್.ಓ. ರವರು ವರ್ಗಾವಣೆ ಮಾಡುವುದಕ್ಕೆ ಅವಕಾಶ ಇಲ್ಲವೇನು ? ಒಂದು ವೇಳೆ ಅಧಿಕಾರ ಇದ್ದರೆ ಏತಕ್ಕೆ ವರ್ಗಾವಣೆ ಮಾಡಬಾರದು ? ೫ ವರ್ಷಗಳಿಗೂ ಮೇಲ್ಪಟ್ಟು ಒಂದೇ ಕಡೆ ಸೇವೆಯನ್ನು ಸಲ್ಲಿಸಿರುವಂತಹ ನೌಕರರನ್ನು ವರ್ಗಾವಣೆ ಮಾಡುವ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಹೆಚ್.ಟಿ. ಕೃಷ್ಣಪ್ಪ.—ಮಾನ್ಯ ಅಧ್ಯಕ್ಷರೇ, ಮಿತವ್ಯಯ ದೃಷ್ಟಿಯಿಂದ ವರ್ಗಾವಣೆಗಳನ್ನು ಈ ಹಿಂದೆ ನಿಷೇದಿಸಲಾಗಿತ್ತು. ಕನಿಷ್ಟ ಪಕ್ಷ ಯಾರು ೫ ವರ್ಷಗಳಿಗೆ ಮೇಲ್ಪಟ್ಟು ಒಂದೇ ಕಡೆ ಸೇವೆಯನ್ನು ಸಲ್ಲಿಸಿರುತ್ತಾರೋ ಅಂತಹವರನ್ನು ಅವರ ಸ್ವಂತ ಕೋರಿಕೆಯ ಮೇರೆಗೆ ವರ್ಗಾವಣೆ ಮಾಡಲಾಗಿದೆ. ಎರಡನೆಯದಾಗಿ ಯಾವ ಸರ್ಕಾರಿ ನೌಕರನ ಮೇಲೆ ಸಾರ್ವಜನಿಕರಿಂದ ದೂರುಗಳು ಬಂದಿದ್ದರೆ ಅಂತಹ ಅಧಿಕಾರಿಯನ್ನು ಸಹ ವರ್ಗಾವಣೆ ಮಾಡಲಾಗಿದೆ. ಇನ್ನು ಅಲ್ಲಿ ಸುಮಾರು ೨೧ ಜನ ಸರ್ಕಾರಿ ನೌಕರರು ಮಾತ್ರ ಉಳಿದುಕೊಂಡಿದ್ದಾರೆ.

ಶ್ರೀ ಆರ್. ಎನ್. ನಾಯ್ಕ.—ನನ್ನ ದೃಷ್ಟಿಯಲ್ಲಿ ಮಾನ್ಯ ಮಂತ್ರಿಗಳು ಕೊಟ್ಟಂತಹ ಉತ್ತರ ಸಮಂಜಸವಾಗಿಲ್ಲ. ೫ ವರ್ಷಗಳ ಕಾಲ ಯಾರು ಒಂದೇ ಕಡೆ ಸರ್ಕಾರಿ ಸೇವೆಯನ್ನು ಸಲ್ಲಿಸಿರುತ್ತಾರೋ ಅಂತಹವರನ್ನು ತಮ್ಮ ಸರ್ಕಾರಿ ಆಜ್ಞೆಯ ಪ್ರಕಾರ ವರ್ಗಾವಣೆ ಮಾಡಬೇಕು. ಆದರೂ ಕೂಡ ಅಲ್ಲಿ ಕೆಲವರು ಸುಮಾರು ೧೦–೧೫ ವರ್ಷಗಳಿಂದ ಸೇವೆಯನ್ನು ಸಲ್ಲಿಸಿಕೊಂಡು ಬಂದಿದ್ದಾರೆ, ಅವರನ್ನು ಏತಕ್ಕೆ ವರ್ಗಾವಣೆ ಮಾಡಿಲ್ಲ. ಸುಮಾರು ೧೦ ವರ್ಷಗಳಿಗೂ ಮೇಲ್ಪಟ್ಟು ಸೇವೆ ಒಂದೇ ಕಡೆ ಸಲ್ಲಿಸಿದ್ದಾರೆ. ನಾನು ಕೇವಲ ನರ್ಸ್‌ಗಳ ಬಗ್ಗೆ ಮಾತ್ರ ಹೇಳುತ್ತಿಲ್ಲ. ಎಲ್ಲಾ ನೌಕರರ ಬಗ್ಗೆಯು ಹೇಳುತ್ತಿದ್ದೇನೆ. ತಮ್ಮ ಆದೇಶದ ಸಂಖ್ಯೆ ಡಿಪಿಎಆರ್ ೯ ಎಸ್‌ಟಿಆರ್ ೮೪ ದಿನಾಂಕ ೫-೯-೮೫ರ ಪ್ರಕಾರ ಆದೇಶವನ್ನು ಹೊರಡಿಸಿದ್ದೀರಿ. ಈ ರೀತಿಯ ಆದೇಶವನ್ನು ಹೊರಡಿಸಿದ ಮೇಲೆ ಆ ಆದೇಶವನ್ನು ಏತಕ್ಕೆ ಪಾಲನೆ ಮಾಡುತ್ತಿಲ್ಲ ? ಆ ಆದೇಶ ಇಲ್ಲವೆಂದಾದರೆ ಅದನ್ನಾದರೂ ಹೇಳಿ, ಯಾವ ಅಧಿಕಾರಿ ಎಷ್ಟು ವರ್ಷಗಳಾದರೂ ಒಂದೇ ಕಡೆ ಇರಲಿ.

ಅಧ್ಯಕ್ಷರು.—ಮಾನ್ಯ ಸದಸ್ಯರು ಮಾನ್ಯ ಮುಖ್ಯ ಮಂತ್ರಿಗಳು ಹೊರಡಿಸಿದ ಆದೇಶವನ್ನು ಏತಕ್ಕೆ ಸರಿಯಾಗಿ ಪಾಲನೆ ಮಾಡುತ್ತಿಲ್ಲವೆಂದು ಕೇಳುತ್ತಿದ್ದಾರೆ.

ಶ್ರೀ ಹೆಚ್.ಟಿ. ಕೃಷ್ಣಪ್ಪ.—ಮಾನ್ಯ ಅಧ್ಯಕ್ಷರೇ ಮಿತವ್ಯಯ ದೃಷ್ಟಿಯಿಂದ ಕಳೆದ ಸಾರಿ ನಾವು ವರ್ಗಾವಣೆಯನ್ನು ನಿಷೇದಿಸಲಾಗಿತ್ತು ಆದರೂ ಸಹ ಸಾರ್ವಜನಿಕರಿಂದ ಯಾವ ಅಧಿಕಾರಿಯ ಮೇಲೆ ದೂರುಗಳು ಬಂದಿದ್ದವೋ ಅಂತಹ ಅಧಿಕಾರಿಯನ್ನು ನಾವು ವರ್ಗಾವಣೆ ಮಾಡಿದ್ದೇವೆ. ೫ ವರ್ಷ ಗಳಿಂದ ಒಂದೇ ಜಾಗದಲ್ಲಿ ಇದ್ದಂತಹ ಅಧಿಕಾರಿ ತನ್ನ ಸ್ವಂತ ಇಚ್ಛೆಯಿಂದ ವರ್ಗಾವಣೆಯನ್ನು ಕೋರಿದ್ದರೆ ಅಂತಹ ಅಧಿಕಾರಿಯನ್ನು ಸಹ ನಾವು ವರ್ಗಾವಣೆ ಮಾಡಿದ್ದೇವೆ. ಈ ರೀತಿ ವರ್ಗಾವಣೆ ಆಗಿ ಉಳಿದವರು ಇನ್ನು ಕೇವಲ ೨೧ ಜನ ಮಾತ್ರ. ಅವರನ್ನು ಸಹ ವರ್ಗ ಮಾಡಲಾಗುವುದು. ಮಾನ್ಯ ಸದಸ್ಯರು ಹೇಳಿದ ಪ್ರಕಾರ ಅವರೆಲ್ಲರಿಗೂ ೫ ವರ್ಷಗಳಿಗೂ ಮೇಲ್ಪಟ್ಟು ಆಗಿದೆ.

ಅಧ್ಯಕ್ಷರು.—೫ ವರ್ಷಗಳಿಗೆ ಮೇಲ್ಪಟ್ಟು ಒಂದೇ ಕಡೆ ಸೇವೆಯನ್ನು ಸಲ್ಲಿಸಿದವರನ್ನು ಏತಕ್ಕೆ ವರ್ಗಾವಣೆ ಮಾಡಲಿಲ್ಲವೆಂದು ಮಾನ್ಯ ಸದಸ್ಯರ ಪ್ರಶ್ನೆ ?

ಶ್ರೀ ಆರ್. ಎನ್. ನಾಯಕ್.—೫ ವರ್ಷಗಳಿಗೂ ಮೇಲ್ಪಟ್ಟು ಒಂದೇ ಕಡೆ ಸೇವೆ ಸಲ್ಲಿಸಿದ ವರನ್ನು ವರ್ಗಾವಣೆ ಮಾಡಬೇಕೆಂದು ಆದೇಶ ಇದೆ. ಆದರೂ ಸಹ ಆ ಆದೇಶವನ್ನು ಪಾಲನೆ ಮಾಡುತ್ತಿಲ್ಲ. ಅಂತಹ ಆದೇಶವನ್ನು ಏತಕ್ಕೆ ಇಟ್ಟುಕೊಂಡಿದ್ದೀರಿ ? ಆ ಆದೇಶವನ್ನು ತೆಗೆದು ಹಾಕಿ ಯಾವ ಅಧಿಕಾರಿ ಎಲ್ಲಿ ಬೇಕಾದರೂ ಎಷ್ಟು ವರ್ಷಗಳಾದರೂ ಇರಬಹುದೆಂದು ಆಜ್ಞೆ ಮಾಡಿ ಬಿಡಿ. ಈಗ ಹೊರಡಿಸಿರುವಂತಹ ಆದೇಶಕ್ಕೆ ಬೆಲೆ ಏನು ಎಂದು ಹೇಳುತ್ತೀರಾ ?

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಸಾಮಾನ್ಯವಾಗಿ ಯಾರು ೫ ವರ್ಷಗಳ ಕಾಲ ಒಂದೇ ಕಡೆ ಸೇವೆಯನ್ನು ಸಲ್ಲಿಸಿರುತ್ತಾರೋ ಅಂತಹವರನ್ನು ವರ್ಗಾವಣೆ ಮಾಡಬೇಕೆಂದು ಆದೇಶ ಇದೆ. ಆದರೂ ಸಹ ಮಿತವ್ಯಯದ ದೃಷ್ಟಿಯಲ್ಲಿ ವರ್ಗಾವಣೆ ಕಳೆದ ಸಾಲಿನಲ್ಲಿ ಮಾಡಲಿಲ್ಲ. ಇನ್ನು ಕೆಲವು ಜನ ಅಧಿಕಾರಿಗಳು ಟಿ.ಎ. ತೆಗೆದುಕೊಳ್ಳುವ ವರ್ಗಾವಣೆಯನ್ನು ಕೋರಿದ್ದರಿಂದ ಅಂತಹ ಅಧಿಕಾರಿಗಳನ್ನು ವರ್ಗಾವಣೆ ಮಾಡಿದ್ದೇವೆ.

ಶ್ರೀ ಆರ್. ಎನ್. ನಾಯಕ್.—ಮಿತವ್ಯಯ ಮಾಡಬೇಕೆಂದಿದ್ದರೆ ಈ ಆದೇಶವನ್ನು ಏತಕ್ಕೆ ಇನ್ನು ಉಳಿಸಿಕೊಂಡಿದ್ದೀರಿ ? ಈ ಆದೇಶವನ್ನು ಇಟ್ಟುಕೊಂಡು ತಾವು ಮಿತವ್ಯಯ ಸಾಧಿಸಲು ಹೊರಟರೆ ಅದು ಸಾಫಲ್ಯವಾಗುವುದಿಲ್ಲ.

ಅಧ್ಯಕ್ಷರು.—ಆಯಿತು. ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಮಾನ್ಯ ಶಿವಣ್ಣನವರೇ ತಾವು ಮುಂದಿನ ಪ್ರಶ್ನೆಯನ್ನು ಕೇಳಿ...

ಶ್ರೀ ಗೋಪಾಲ ಮುಕುಂದ ಕಾನಡೆ.—ಮಾನ್ಯ ಅಧ್ಯಕ್ಷರೇ ಇವರು ೩ ಗಂಟೆಗಳಲ್ಲಿ ಮೂರು ಸಾರಿ ವರ್ಗಾವಣೆ ಮಾಡಿರುವಂತಹ ಉದಾಹರಣೆಗಳು ನನ್ನ ಬಳಿ ಇವೆ. ಶ್ರೀ ಸುಬ್ಬರಾಯಪ್ಪ ಎನ್ನುವವರನ್ನು ಕೆ.ಸಿ. ಜನರಲ್ ಆಸ್ಪತ್ರೆಗೆ ವರ್ಗಾವಣೆ ಮಾಡಿ, ಅವರು ಅಲ್ಲಿ ಹೋಗಿ ಡ್ಯೂಟಿ ರಿಪೋರ್ಟ್ ಮಾಡಿಕೊಳ್ಳುವಷ್ಟರಲ್ಲಿ ಮತ್ತೊಂದು ವರ್ಗಾವಣೆ ಆರ್ಡರ್ ಬಂತು.....

ಅಧ್ಯಕ್ಷರು.—ನಾನು ನೀವು ಮಾತನಾಡುವುದಕ್ಕೆ ಅವಕಾಶ ಕೊಟ್ಟಿಲ್ಲ. ದಯವಿಟ್ಟು ತಾವು ಕುಳಿತುಕೊಳ್ಳಿ.

ಶ್ರೀ ಗೋಪಾಲ ಮುಕುಂದ ಕಾನಡೆ.—ಮಾನ್ಯ ಅಧ್ಯಕ್ಷರೇ.....

ಅಧ್ಯಕ್ಷರು.—ಮಾನ್ಯ ಸದಸ್ಯರು ಮಾತನಾಡಿದ್ದು ಏನೂ ರೆಕಾರ್ಡ್‌ಗೆ ಹೋಗುವುದಿಲ್ಲ.

(ಗೊಂದಲ)

ಶ್ರೀ ಗೋಪಾಲ ಮುಕುಂದ ಕಾನಡೆ.—ದಿನಾಂಕ ೯-೫-೬೫ರಂದು ಶ್ರೀ ಸುಬ್ಬರಾಯಪ್ಪ ಎನ್ನುವವರನ್ನು ೩ ಸಾರಿ ವರ್ಗಾವಣೆಯನ್ನು ಮಾಡಿದ್ದಾರೆ.....

(ಗೊಂದಲ)

ಅಧ್ಯಕ್ಷರು.—ಮಾನ್ಯ ಸದಸ್ಯರು ಮಾತನಾಡಿದ್ದು ರೆಕಾರ್ಡ್ ಆಗುವುದಿಲ್ಲ. ನತಿಂಗ್ ವಿಲ್ ಗೋ ಆನ್ ರೆಕಾರ್ಡ್.

(ಗೊಂದಲ)

ಅಧ್ಯಕ್ಷರು.—ನಿಮ್ಮಲ್ಲಿ ದಾಖಲೆ ಇದ್ದರೆ ಅದನ್ನು ಪತ್ರದ ಮೂಲಕ ಮಾನ್ಯ ಮಂತ್ರಿಗಳ ಗಮನಕ್ಕೆ ಬರೆದು ಕಳುಹಿಸಿಕೊಡಿ.....

ಶ್ರೀ ಗೋಪಾಲ ಮುಕುಂದ ಕಾನಡೆ.—ಮಾನ್ಯ ಅಧ್ಯಕ್ಷರೇ ನನ್ನ ಬಳಿ ದಾಖಲೆ ಇದೆ. ಬೇಕಾದರೆ ತಮಗೆ ಕೊಡುತ್ತೇನೆ. ಒಬ್ಬ ಹರಿಜನ ನೌಕರನನ್ನು ಮೂರು ಸಾರಿ ವರ್ಗಾವಣೆ ಮಾಡಿದ್ದಾರೆ. ಶ್ರೀ ಸುಬ್ಬರಾಯಪ್ಪ ಎನ್ನುವವರು ಕೆ.ಸಿ. ಜನರಲ್ ಆಸ್ಪತ್ರೆಗೆ ಹೋಗಿ ೧೧ ಗಂಟೆಗೆ ಡ್ಯೂಟಿ ರಿಪೋರ್ಟ್ ಮಾಡಿಕೊಂಡರು ಆದರೆ ಅದೇ ದಿವಸ ೧-೦೦ ಗಂಟೆಯೊಳಗೆ ಮತ್ತೊಂದು ವರ್ಗಾವಣೆ ಆರ್ಡರ್ ಅವರಿಗೆ ಬಂತು.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಆ ಪ್ರಶ್ನೆ ಇಲ್ಲಿ ಉದ್ಭವಿಸುವುದಿಲ್ಲ...

ಶ್ರೀ ಗೋಪಾಲ ಮುಕುಂದ ಕಾನಡೆ.—ಮಾನ್ಯ ಅಧ್ಯಕ್ಷರೇ...

ಅಧ್ಯಕ್ಷರು. ತಾವು ದಯವಮಾಡಿ ಕುಳಿತುಕೊಳ್ಳಿ. ನಾನು ತಮಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿಲ್ಲ. ಶ್ರೀ ಶಿವಣ್ಣನವರು ಮುಂದಿನ ಪ್ರಶ್ನೆಯನ್ನು ಕೇಳಲಿ. ತಾವು ಈ ರೀತಿ ಮಾತನಾಡುತ್ತಿದ್ದರೆ ಅದು ರೆಕಾರ್ಡ್‌ಗೆ ಹೋಗುವುದಿಲ್ಲ.

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ ನನಗೆ ಆಶ್ಚರ್ಯವಾಗುತ್ತಿದೆ. ಈ ವಿಚಾರದಲ್ಲಿ ಇಷ್ಟೊಂದು ಉದ್ವೇಗಕ್ಕೆ ಮಾನ್ಯ ಸದಸ್ಯರು ಏತಕ್ಕೆ ಹೋಗುತ್ತಿದ್ದಾರೋ ನನಗೆ ಗೊತ್ತಾಗುತ್ತಿಲ್ಲ. ಅಧಿಕಾರಿಗಳ ವರ್ಗಾವರ್ಗಿಯನ್ನು ಸಾರ್ವಜನಿಕರ ಹಿತದೃಷ್ಟಿಯಿಂದ ಮಾಡುತ್ತೇವೆ. ನಮ್ಮ ಆಡಳಿತದ ಹಿತದೃಷ್ಟಿಯಿಂದ ಮಾಡುತ್ತೇವೆ ಮತ್ತೆ ಕೆಲವು ಸಂದರ್ಭಗಳಲ್ಲಿ ಶಾಸಕರು ನಮಗೆ ಪತ್ರ ಬರೆಯುತ್ತಾರೆ. ಆ ದೃಷ್ಟಿಯಿಂದಲೂ ಕೂಡ ನಾವು ಅಧಿಕಾರಿಗಳನ್ನು ವರ್ಗಾವಣೆ ಮಾಡುತ್ತೇವೆ. ಇನ್ನು ಕೆಲವು ವಿಶೇಷ ಸಂದರ್ಭಗಳಲ್ಲಿ ಅಧಿಕಾರಿಗಳು ವೈಯಕ್ತಿಕವಾಗಿ ಬಂದು ಕೇಳಿಕೊಳ್ಳುತ್ತಾರೆ ಅಂತಹ ಸಂದರ್ಭಗಳಲ್ಲಿ ಕೂಡ ನಾವು ವರ್ಗಾವಣೆಯನ್ನು ಮಾಡುತ್ತೇವೆ ಇದರ ಬಗ್ಗೆ ಇಷ್ಟೊಂದು ತೀವ್ರವಾಗಿ ತಮ್ಮ ಭಾವನೆಗಳನ್ನು ವ್ಯಕ್ತಪಡಿಸುವ ಅಗತ್ಯವಿಲ್ಲ ಯಾವುದಾದರೂ ಅಧಿಕಾರಿಯನ್ನು ದುರುದ್ದೇಶ ಇಟ್ಟುಕೊಂಡು ವರ್ಗಾವಣೆ ಮಾಡಿದ್ದೇವೆಂದು ಮಾನ್ಯ ಸದಸ್ಯರಿಗೆ ಅನಿಸಿದರೆ ಆಥವಾ ಯಾವ ಅಧಿಕಾರಿಗೆ ತೊಂದರೆ ಆಗಿದೆ ಎಂದರೆ ಅಂತಹವರು ಲೋಕಾಯುಕ್ತರು ಅಥವಾ ಉಪ ಲೋಕಾಯುಕ್ತರ ಬಳಿ ಹೋಗಲಿ ಅಲ್ಲಿ ಅವರಿಗೆ ಅನ್ಯಾಯವಾಗಿದ್ದರೆ ನ್ಯಾಯವನ್ನು ಅವರು ಕೊಡುತ್ತಾರೆ. ಅದಕ್ಕೆ ನಾವು ಲೋಕಾಯುಕ್ತ ಮತ್ತು ಉಪ ಲೋಕಾಯುಕ್ತರನ್ನು ನೇಮಿಸಿದ್ದೇವೆ. ದೂರು ಕೊಡಲಿ ಅಲ್ಲಿ ಅವರಿಗೆ ಅನ್ಯಾಯವಾಗಿದ್ದರೆ ನ್ಯಾಯ ಸಿಗಬಹುದು.

ಅಧ್ಯಕ್ಷರು.—ಶ್ರೀ ಶಿವಣ್ಣನವರೇ ತಾವು ಮುಂದಿನ ಪ್ರಶ್ನೆಯನ್ನು ಕೇಳಿ.

ಶ್ರೀ ಆರ್.ಎನ್. ನಾಯಕ್.—ಮಾನ್ಯ ಅಧ್ಯಕ್ಷರೇ ಆ ಆದೇಶವನ್ನು.....

ಅಧ್ಯಕ್ಷರು.—ಮಾನ್ಯ ಸದಸ್ಯರು ಮಾತನಾಡಿದ್ದು ರೆಕಾರ್ಡ್‌ಗೆ ಹೋಗುವುದಿಲ್ಲ.

(ಗೊಂದಲ)

ಶ್ರೀ ಆರ್.ಎನ್. ನಾಯಕ್.—ನಿಮ್ಮ ಆದೇಶಕ್ಕೆ ಬೆಲೆ ಏನು ಬಂತು ?

ಅಧ್ಯಕ್ಷರು.—ತಾವು ಮಾತನಾಡಿದ್ದುದು ರೆಕಾರ್ಡ್ ಆಗುವುದಿಲ್ಲ.

(ಗೊಂದಲ)

ಶ್ರೀ ಎಂ. ವೀರಪ್ಪಮೊಯ್ಲಿ.—ಈಗ ಮಾನ್ಯ ಸದಸ್ಯರ ಕಳವಳ ಏನೆಂದರೆ ೫ ವರ್ಷಗಳ ಸೇವೆ ಸಲ್ಲಿಸಿದ ಮೇಲೂ ವರ್ಗಾವಣೆ ಆಗಲಿಲ್ಲವೆಂದರೆ ಆ ಆದೆ ಶಕ್ಕೆ ಬೆಲೆ ಏನು ಎಂದು ? ಆದರೆ ಮಾನ್ಯ ಮುಖ್ಯಮಂತ್ರಿಗಳು ಈಗ ಹೇಳಿದರು ಬೇರೆ ಬೇರೆ ಕಾರಣಗಳಿಂದ, ಸಾರ್ವಜನಿಕರ ಹಿತದೃಷ್ಟಿಯಿಂದ, ಶಾಸಕರು ಪತ್ರ ಬರೆದರೆ, ಆಡಳಿತ ಹಿತದೃಷ್ಟಿಯಿಂದ ಮತ್ತು ನೌಕರರೇ ಸ್ವಂತ ಬಂದು ತಮ್ಮ ತೊಂದರೆಗಳನ್ನು ಹೇಳಿಕೊಂಡಾಗ ವರ್ಗಾವಣೆಯನ್ನು ಮಾಡುತ್ತೇವೆ ಮತ್ತು ಮಾಡಿದ್ದೇವೆಂದು ಹೇಳಿದರು. ಆದರೆ ಇಲ್ಲಿ ಉದ್ಭವವಾಗಿರತಕ್ಕಂಥ ಪ್ರಶ್ನೆ ಏನೆಂದರೆ ವರ್ಗಾವರ್ಗಿ ನೀತಿ ಏನಿದೆ ಇದರ ಬಗ್ಗೆ ಅವರು ಪ್ರಶ್ನೆ ಮಾಡುತ್ತಿದ್ದಾರೆ. ಮಾನ್ಯ ಸಚಿವರು ಆ ನೀತಿಯನ್ನು ಸ್ಪಷ್ಟಪಡಿಸಿದ್ದರೆ ಇಂತಹ ಗೊಂದಲದ ವಾತಾವರಣ ಉಂಟಾಗುತ್ತಿರಲಿಲ್ಲ. ಅವರು ಸರಿಯಾಗಿ ಉತ್ತರ ಕೊಡಲಿಲ್ಲ. ಮಾನ್ಯ ಸಚಿವರು ಉತ್ತರ ಕೊಡುವಾಗ ಹೇಳಿದರು ನಾವು ವಿಚಾರ ಮಾಡಿಯೇ ವರ್ಗಾವರ್ಗಿಯನ್ನು ಮಾಡಿದ್ದೇವೆಂದು ಆದರೆ ಈ ವರ್ಗಾವರ್ಗಿಯ ವಿಚಾರದಲ್ಲಿ ಸ್ಪಷ್ಟವಾದ ನೀತಿಯನ್ನು ನಿರೂಪಿಸಲಿಲ್ಲ. ಮಾನ್ಯ ಸದಸ್ಯರು ವಿಧಾನ ಸಭೆಯಲ್ಲಿ ಪ್ರಶ್ನೆ ಮಾಡುವಂತಹ ಹಕ್ಕು ಇದೆ. ಅವರು ಪ್ರಶ್ನೆಯನ್ನು ಮಾಡಿದಾಗ ಮಂತ್ರಿಗಳು ಸಹ ಸ್ಪಷ್ಟವಾದ ಚಿತ್ರವನ್ನು ಕೊಡಬೇಕು.

ಶ್ರೀ ಹೆಚ್.ಟಿ. ಕೃಷ್ಣಪ್ಪ.—ಮಾನ್ಯ ಅಧ್ಯಕ್ಷರೇ, ಸೃಷ್ಟೀಕರಣ ಮಾಡುವುದಕ್ಕೆ ಇದರಲ್ಲಿ ಯಾವ ಅಂಶಗಳೂ ಸೇರಿಲ್ಲ. ನಾನು ಈಗಾಗಲೇ ಹೇಳಿದ್ದೇನೆ, ಹಣಕಾಸಿನ ದೃಷ್ಟಿಯಿಂದ ಮಿತವ್ಯಯ ಮಾಡುವ ಸಲುವಾಗಿ ವರ್ಗಾವಣೆಗಳನ್ನು ಮಾಡಲಿಲ್ಲ, ಐದು ವರ್ಷಗಳನ್ನು ಯಾರು ಪೂರೈಸಿದ್ದಾರೆ

ಅಂತವರನ್ನು ವರ್ಗಾವಣೆ ಮಾಡಿದೆ, ಬೇರೆ ಕಡೆ ವರ್ಗಾವಣೆ ಮಾಡಿಕೊಡಿ ಎಂದು ಕೇಳಿದವರನ್ನು ವರ್ಗ ಮಾಡಿದ್ದೇವೆ. ಸಾರ್ವಜನಿಕರಿಂದ ದೂರು ಬಂದಿದ್ದರೆ ಅಂತಹವರನ್ನು ವರ್ಗಾವಣೆ ಮಾಡಿದ್ದೇವೆ. ಯಾವ ದೂರು ಇಲ್ಲದಿದ್ದವರು ೨೧ ಜನ ಇದ್ದಾರೆ.

ಹೆಗ್ಗಡ ದೇವನಕೋಟೆಯಲ್ಲಿ ನಿರ್ಮಿಸಲಾಗುತ್ತಿರುವ ಸಾರ್ವಜನಿಕ ಆಸ್ಪತ್ರೆ

೨೩(೩೪೦) ಶ್ರೀ ಎಂ. ಶಿವಣ್ಣ (ಹೆಗ್ಗಡದೇವನಕೋಟೆ) ಮಾನ್ಯ ಆರೋಗ್ಯ ಹಾಗೂ ಅಬಕಾರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

೧. ಹೆಗ್ಗಡ ದೇವನ ಕೋಟೆಯಲ್ಲಿ ನಿರ್ಮಿಸಲಾಗುತ್ತಿರುವ ೫೦ ಹಾಸಿಗೆಯ ಸಾರ್ವತ್ರಿಕ ಆಸ್ಪತ್ರೆಗೆ ಕಟ್ಟಡ ನಿರ್ಮಾಣ ಯಾವಾಗ ಪ್ರಾರಂಭವಾಯಿತು ? ಈಗ ಯಾವ ಹಂತದಲ್ಲಿದೆ ?

೨. ಈ ಕಟ್ಟಡ ನಿರ್ಮಾಣವನ್ನು ಯಾವಾಗ ಪೂರ್ಣಗೊಳಿಸಲಾಗುವುದು ?

೩. ನಿರ್ಮಾಣದಲ್ಲಿ ವಿಳಂಬವಾಗುತ್ತಿರುವುದಕ್ಕೆ ಕಾರಣಗಳೇನು ?

ಶ್ರೀ ಹೆಚ್. ಟಿ. ಕೃಷ್ಣಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು).—

೧) ಕಟ್ಟಡ ನಿರ್ಮಾಣ ದಿನಾಂಕ ೨೨-೧೧-೧೯೮೨ ರಂದು ಪ್ರಾರಂಭವಾಯಿತು. ಈಗ ಪೂರ್ಣಗೊಳ್ಳುವ ಹಂತದಲ್ಲಿದೆ.

೨) ೧೯೮೬-೮೭ನೇ ಸಾಲಿನಲ್ಲಿ ಪೂರ್ಣಗೊಳಿಸಲಾಗುವುದು.

೩) ಸಾಕಷ್ಟು ಸಿಮೆಂಟ್ ಮತ್ತು ಉಕ್ಕು ಸರಬರಾಜು ಇಲ್ಲದ ಕಾರಣ.

ಶ್ರೀ ಎಂ. ಶಿವಣ್ಣ.—ಮಾನ್ಯ ಅಧ್ಯಕ್ಷರೇ, ಹೆಗ್ಗಡದೇವನಕೋಟೆಯಲ್ಲಿ ನಿರ್ಮಿಸಲಾಗುತ್ತಿರುವ ಆಸ್ಪತ್ರೆಯ ಕಟ್ಟಡ ನಿರ್ಮಾಣದ ವಿಳಂಬಕ್ಕೆ ಸಿಮೆಂಟ್ ಮತ್ತು ಉಕ್ಕು ಸರಬರಾಜು ಇಲ್ಲದ ಕಾರಣ ಎಂದು ಹೇಳುತ್ತಿದ್ದಾರೆ. ಒಂದು ವರ್ಷದಿಂದಲೂ ಇದೇ ವಿಚಾರವನ್ನು ಸಂಬಂಧಪಟ್ಟ ಅಧಿಕಾರಿಗಳು ಹೇಳುತ್ತಿದ್ದಾರೆ. ಈ ಆಸ್ಪತ್ರೆ ಕಟ್ಟಡ ಈಗಾಗಲೇ ಆರು ತಿಂಗಳ ಹಿಂದೆ ಆಗಬೇಕಾಗಿತ್ತು. ಈ ಪ್ರಶ್ನೆ ಬಗ್ಗೆ ಲೋಕೋಪಯೋಗಿ ಮಂತ್ರಿಗಳು ಉತ್ತರ ಹೇಳಬೇಕಾಗಿತ್ತು ಕಾರಣಾಂತರದಿಂದ ಆರೋಗ್ಯ ಮಂತ್ರಿಗಳು ಉತ್ತರಕೊಡುತ್ತಿದ್ದಾರೆ. ಈ ವಿಚಾರ ಇವರಿಗೆ ಸೇರುವುದಿಲ್ಲವೆಂದು ನನ್ನ ಭಾವನೆ. ಸಂಬಂಧಪಟ್ಟ ಮಂತ್ರಿಗಳು ಇದನ್ನು ಆದಷ್ಟು ಬೇಗ ಮಾಡಿಕೊಡಬೇಕು ಹಾಗೂ ವೈದ್ಯರುಗಳಿಗೆ ಕ್ವಾರ್ಟರ್ಸ್ ಕಟ್ಟಿಸಿಕೊಡಬೇಕು.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಮಾನ್ಯ ಅಧ್ಯಕ್ಷರೇ, ಈಗಾಗಲೇ ಕಟ್ಟಡ ಪೂರ್ಣವಾಗಿದೆ. ಉಳಿದಿರುವುದು ಕೇವಲ ಸ್ಯಾನಿಟರಿ ಮತ್ತು ಎಲೆಕ್ಟ್ರಿಫಿಕೇಷನ್ ಮಾತ್ರ ಒಂದೆರಡು ತಿಂಗಳೊಳಗೆ ಕಟ್ಟಡ ಪೂರ್ಣವಾಗುತ್ತದೆ. ಅನಂತರ ಉಪಯೋಗಕ್ಕೆ ಯೋಗ್ಯವಾಗುತ್ತದೆ. ೧೯೮೨ರಿಂದ ಪ್ರಾರಂಭವಾಗಿ ಏಕೆ ನಿಧಾನವಾಯಿತು ಎನ್ನುವ ಪ್ರಶ್ನೆಗೆ ನಾನು ಉತ್ತರ ಕೊಟ್ಟಿದ್ದೇನೆ. ಸಿಮೆಂಟ್ ಮತ್ತು ಉಕ್ಕು ಸಕಾಲದಲ್ಲಿ ಒದಗಿಸುವುದಕ್ಕೆ ಆಗದೆ ನಿಧಾನವಾಯಿತು. ೧೫ ಲಕ್ಷ ಅಂದಾಜುವೆಚ್ಚದಲ್ಲಿ ಪ್ರಾರಂಭವಾದ ಕಟ್ಟಡ, ಇವತ್ತು ೨೩ ಲಕ್ಷ ಖರ್ಚಾಗಿದೆ. ಈಗ ಕೆಲಸ ಮುಗಿದಿದೆ.

ಮೈಸೂರು ಅರಮನೆಯ ಪ್ರವೇಶ ಧನದಿಂದ ಸಂಗ್ರಹವಾದ ಹಣ

೨೪(೧೬೪ ಬಿ) ಶ್ರೀ ವೇದಾಂತ ಹೆಮ್ಮಿಗೆ(ಕೃಷ್ಣರಾಜ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಮೈಸೂರು ಅರಮನೆಯ ಪ್ರವೇಶ ಧನದಿಂದ ಕಳೆದ ಮೂರು ವರ್ಷಗಳಿಂದ ಸಂಗ್ರಹವಾದ ಹಣವೆಷ್ಟು ?

ಆ) ಇದರಲ್ಲಿ ಅರಮನೆ ನವೀಕರಣಕ್ಕೆ ಖರ್ಚಾಗಿರುವ ಹಣವೆಷ್ಟು ?

ಇ) ಈ ಅರಮನೆ ಸರ್ಕಾರಕ್ಕೆ ಸೇರಿದ್ದೆ ಅಥವಾ ರಾಜ್ಯ ವಂಶಕ್ಕೆ ಸೇರಿದ್ದೆ ?